ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿ ಕೊಡಲಾಗುವುದು.

4. ಅಧ್ಯಕ್ಷರ ತೀರ್ಪು

ವಿಷಯ : ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು ರಾಜ್ಯಪಾಲರಿಗೆ ಬರೆದಿರುವ ಪತ್ರದ ಪ್ರತಿಕ್ರಿಯೆ ನೀಡಿರುವ ವಿಷಯದ ಬಗ್ಗೆ.

ಅಧ್ಯಕ್ಷರು : ನಾನು ಇದನ್ನು ಪರೀಶಿಲನೆ ಮಾಡುತ್ತೇನೆ. ಏಕೆಂದರೆ ಇದೊಂದು ಟೆಕ್ನಿಕಲ್ ಪಾಯಿಂಟ್. It is between the Leader of the Opposition of the Council and the Governor. ನಾನು ಎಲ್ಲಾ ಅಸ್ಪೆಕ್ಟ್‌ಗಳನ್ನು ನೋಡುತ್ತೇನೆ. Legal aspect ಎಲ್ಲವನ್ನೂ ನೋಡಬೇಕಾಗುತ್ತದೆ. Then I will give my ruling.

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅ ಎಸ್.ಬಿ. ಪಾಟೀಲ್(ಅಪರ ಕಾರ್ಯದರ್ಶಿಗಳು) : ಮಾನ್ಯ ಅಧ್ಯಕ್ಷರೆ, ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಸನ್ಮಾನ್ಯ ರಾಜ್ಯಪಾಲರಿಂದ ಪುನರ್‌ಪರಿಗಣನೆಗೆ ಹಿಂತಿರುಗಿಸಲ್ಪಟ್ಟಿರುವ 2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಆ ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2005ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮದ ಅಧ್ಯಾಯ 6.33 (2) ರ ಪ್ರಕರಣದ ಮೇರೆಗೆ;

2006ರ ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ ನಿಯಮಗಳನ್ನು ಮತ್ತು ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ ನಿಯಮಗಳನ್ನು ದಿನಾಂಕ 13.6.2006ರಂದು ಹೊರಡಿಸಲಾದ ಗ್ರಾಅಪ:41ಉಖಾಯೋ (ಭಾಗ–1) 5ನೇ ಸಂಖ್ಯೆ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಈಗ ಏನೆಂದರೆ, Parliamentary Affairs Minister ದಯಮಾಡಿ ಮಾತನಾಡಬೇಕು. ಈಗ ಬಹಳ ಜನ ಈ ಭಾಗದ ಸದಸ್ಯರು ಈ ಭಾಗದ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕೆಂದು well ಗೆ ಬಂದುಬಿಟ್ಟಿದ್ದರು. ಆದ್ದರಿಂದ, ಕೆಲವು important Bills ಇವೆ. ಆದ್ದರಿಂದ, ಮೊದಲು.....

6. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ಅ. ವಿಷಯ : 150 ಕೋಟಿ ರೂಪಾಯಿ ಗಣಿ ಲಂಚದ ಆಪಾದನೆಯ ಬಗ್ಗೆ

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ನಾನು ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೇನೆ. ಅದು ಬಂದು ನಿಮಗೆ ತಲುಪಿದೆಯೋ, ಇಲ್ಲವೋ?